ಸಣ್ಣಗಿನ ಚೀತ್ಕಾರ ಅವನ ಬಾಯಿಯಿಂದ ಹೊರಟಿತು.

‘ಶೆಲ್ಲಿ’ ಅವನ ಕೂಗಿಗೆ ಮತ್ತೆ ಹಕ್ಕಿಗಳಿಗೆ ಎಚ್ಚರ. ಮತ್ತೆ ಕಲರವ.

* * *

ದಿಣ್ಣೆ ಇಳಿದು ಸಮುದ್ರದ ನೀರಿನತ್ತ ಹೆಜ್ಜೆ ಹಾಕಿದ ಹಿತೇಶನನ್ನು ಹಿಂಬಾಲಿಸಿಕೊಂಡು ಬಂದ ಪ್ರಭಾಕರ. ಹಿತೇಶನ ಮಾತಿನಿಂದ ತೀವ್ರ ಆಘಾತ ಕ್ಕೊಳಗಾಗದಿದ್ದರೂ ಸತ್ಯ ತಿಳಿದಿರುವವನ ಮುಂದೆ ಸೋಲೊಪ್ಪಿಕೊಳ್ಳಲು ತಯಾರಿಲ್ಲದ ಮನಸ್ಸು. ಹುಳುಕು ಹಲ್ಲುಗಳನ್ನು ನಾಲಗೆಯಿಂದ ಸವರಿಕೊಂಡು ಅವನ ಹತ್ತಿರಕ್ಕೆ ಬಂದು ನಿಂತ.

‘ನೀನು ಸತ್ಯ ತಿಳಿದುಕೊಂಡಿರುವುದಕ್ಕೆ ನಾನು ನಿನ್ನ ಹಿತೈಷಿಯಾಗಿ ಹೇಳ್ತಿದ್ದೀನಿ. ಈ ದಿಣ್ಣೆ ನಿನಗೆ ಸುರಕ್ಷಿತ ಅಲ್ಲ. ನೀನು ಇಲ್ಲಿಂದ ಹೊರಡೋದು ಉತ್ತಮ’

ಆಶಾವಾದಿಗೆ ಅವನ ಮಾತು ರುಚಿಸಲಿಲ್ಲ. ಉಬ್ಬರದ ಅಲೆಗಳ ಆಟವನ್ನು ಕಣ್ಣು ತಣಿಯುವಷ್ಟು ನೋಡುತ್ತಾ ನುಡಿದ.

‘ನಿನ್ನ ಬಗ್ಗೆ ಸತ್ಯ ಗೊತ್ತಿರುವುದಕ್ಕು ನಾನು ಇಲ್ಲಿ ಇರುವುದಕ್ಕೂ ಏನು ಸಂಬಂಧ? ಅಸಂಬದ್ಧ ಮಾತಾಡಬೇಡ. ನನ್ನ ಅಲೆದಾಟ ನನಗೆ’ ಮಾತು ನೀರಸವಾಗಿತ್ತು ಅಂತ್ಯದಲ್ಲಿ.

ರಸಿಕ ಕುಹಕ ನಗು ಬೀರಿದ.

‘ನೀನು ಶೆಲ್ಲಿ ಬಗ್ಗೆ ಯಾರತ್ರನೂ ಹೇಳ್ಬೇಡ. ಹಾಗಿದ್ದರೆ ನಿನ್ನ ಸಹಾಯಕ್ಕೆ ನಾನಿದ್ದೇನೆ. ನಿನಗೆ ಅಪಾಯ ಎದುರಾದಾಗ ನಾನು ಪಾರು ಮಾಡ್ತೀನಿ ಅನ್ನೋ ಭರವಸೆ ಕೊಡಬಲ್ಲೆ’

‘ಶೆಲ್ಲಿಯ ಸಾವಿಗೆ ನೀನೇ ಕಾರಣಾಂತ ನಿನ್ನ ಮಾಲೀಕನೇ ಹೇಳ್ತಿದ್ನಲ್ಲ. ಅವನ ಮಾತನ್ನು ರಬ್ಬರ್ ತೋಟದ ಆಳುಗಳು ಒಪ್ಪಿಕೊಂಡಿದ್ದಾರೆ. ನೀನು ತೋಟ ಬಿಟ್ಟು ಓಡಿ ಹೋಗಿ ನಿನ್ನ ಪ್ರಾಣ ಕಾಪಾಡ್ಕೊಂಡೆ. ಆದರೆ ಕಡಲ ಕಿನಾರೆಯಲ್ಲಿ ನೀನು ಮತ್ತೆ ಮೆರೆಯೋದಿಕ್ಕೆ ನೋಡ್ದೆ. ಆದ್ರೆ ಮೀನುಗಾರರು ನಿನ್ನ ಒಪ್ಪಿಕೊಂಡಿಲ್ಲ. ನೀನು ಪಾಂಬು ಅನ್ನೋ ಹೆಸರು ಇಟ್ಕೊಂಡ್ರೂ ಅವರು ನಿನ್ನ ದ್ವೇಷಿಸೋದಿಕ್ಕೆ ಆರಂಭಿಸಿದ್ರು. ನೀನು ಕಾಲ ಚೆನ್ನಾಗಿಲ್ಲ ಅಂದುಕೊಂಡೆ’

ಹಿತೇಶನ ಮಾತಿಗೆ ಮೌನಿಯಾದ ಪ್ರಭಾಕರ.

‘ಪಾಂಬು ನಿನಗೆ ಸರಿಯಾದ ಹೆಸರು. ಆ ಹೆಸರಿನಿಂದಲೇ ನೀನು ಮೀನುಗಾರರ ಸ್ನೇಹ ಸಂಪಾದಿಸೋದಿಕ್ಕೆ ಕೊಚ್ಚಿಯ ಸಮುದ್ರಕ್ಕಿಳಿದೆ. ಅಲ್ಲೂ ನಿನ್ನ ಹುಟ್ಟು ಗುಣ ತೋರಿಸ್ಬಿಟ್ಟೆ. ಅವರು ನಿನ್ನ ಸುಮ್ನೆ ಬಿಟ್ಟಿಲ್ಲ. ಆ ಕಡಲ ತೀರ ನಿನ್ನ ಹೆಣ ಬೀಳುವುದನ್ನು ಕಾಯುತ್ತಿದೆ’

ಪಾಂಬು ತಕ್ಷಣ ಹಿತೇಶನ ರಟ್ಟೆ ಹಿಡಿದ. ಸಮುದ್ರದ ಭೋರ್ಗರೆತ ತೀವ್ರವಾಗಿತ್ತು.

‘ನೀನು ಶೆಲ್ಲಿ ವಿಷಯದಲ್ಲಿ ನನ್ನ ತಪ್ಪು ತಿಳ್ಕೊಂಡಿದ್ದೀಯಾ. ಶೆಲ್ಲಿಯ ಸಾವಿಗೆ ನಾನು ಕಾರಣ ಅಲ್ಲ. ಅದು ರಬ್ಬರ್ ತೋಟದ ಮಾಲೀಕನ ಕುಯುಕ್ತಿ’

ಹಿತೇಶ ಅವನ ಕೈಯನ್ನು ದೂರ ಸರಿಸಿದ. ಮುಗುಳ್ನಗುತ್ತಲೇ ಅವನ ಕಡೆಗೆ ತಿರುಗಿದ. ಬಿಸಿಲಿನ ತಾಪ ಏರುತ್ತಿದ್ದಂತೆ ಅಲೆಗಳ ಹೊಡೆತ ಬಿರುಸಾಗಿತ್ತು. ಪಾತ್ರೆಯ ಕಂಪನಕ್ಕೆ ಒಳಗಿನ ನೀರೆಲ್ಲ ಅಲ್ಲೋಲಕಲ್ಲೋಲವಾಗುವಂತೆ ಸಮುದ್ರ ಕಂಪಿಸಿದಂತಿತ್ತು. ಆ ಕಂಪನದ ತೀವ್ರತೆಗೆ ತೆರೆಗಳ ಗೋಡೆ ಆಳೆತ್ತರಕ್ಕೆ ಜಿಗಿದು ನೊರೆ ನೊರೆಯಾದ ಅಲೆಗಳನ್ನು ನಿರ್ಮಿಸಿ ತಡೆಗೋಡೆಯನ್ನು ಮೀರಿ ದಡಕ್ಕೆ ಅಪ್ಪಳಿಸಿತು. ಪ್ರಭಾಕರ ತತ್ತರಿಸಿದ.

‘ಶೆಲ್ಲಿಯ ಸಾವಿಗೆ ನೀನೇ ಕಾರಣ ಅಂದಿಲ್ಲ ನಾನು. ‘ಬೂದು ಕುಂಬಳ ಕಾಯಿಯನ್ನು ಕದ್ದವನು ಯಾರು ಅಂದ್ರೆ ಹೆಗಲು ಕೊಡವಿಕೊಂಡಂತೆ’ ನೀನೇ ಆಡಿದೆ. ನೀನು ಶೆಲ್ಲಿಯನ್ನು ಮೆಚ್ಕೋ ಹುಚ್ಚು ಸಾಹಸಕ್ಕೆ ಇಳಿದ್ದೆ. ಇದು ನಿನ್ನ ಮಾಲೀಕನಿಗೆ ಇಷ್ಟವಿರದ ವಿಷಯ’

‘ಆದ್ರೆ ಆ ದಿನ ದುಡ್ಡು ಬಟವಾಡೆಯ ಹೊತ್ತಿಗೆ ಶೆಲ್ಲಿ ಬರಲಿಲ್ಲವೆಂದು ಅವಳನ್ನು ಹುಡುಕಿಕೊಂಡು ಹೋಗಿದ್ದೆ. ಆದರೆ ಅವಳ ಹೆಣ ರಬ್ಬರ್ ಮರದ ಕೊಂಬೆಯಲ್ಲಿ ನೇತಾಡುತ್ತಿತ್ತು’

ಅಲೆಗಳನ್ನು ಹಿಂದಿಕ್ಕಿ ಹಿತೇಶ ದಡದತ್ತ ನಡೆದ. ಪ್ರಭಾಕರ ಕೂಡ ಅವನ ಜೊತೆಗೆ ಹೆಜ್ಜೆ ಹಾಕಿದ.

‘ಶೆಲ್ಲಿ ಗಟ್ಟಿಗಿತ್ತಿ ಹೆಣ್ಣು; ರಬ್ಬರ್ ಮರಕ್ಕೆ ನೇಣು ಬಿಗಿದುಕೊಳ್ಳುವಷ್ಟು ದುರ್ಬಲ ಹೆಣ್ಣಲ್ಲ. ಅದೂ ಎಲ್ಲಾ ಆಳುಗಳು ಕೆಲಸ ಮಾಡಿಕೊಂಡಿರುವ ಸಮಯದಲ್ಲಿ’

ಹಿತೇಶನ ಮಾತು ಹಿತವಾಗದಂತೆ ಪ್ರಭಾಕರನ ಮುಖ ಬಿಳಿಚಿಕೊಂಡಿತು. ಸೋಲು ಒಪ್ಪಿಕೊಳ್ಳುವ ಜಾಯಮಾನವಲ್ಲ ರಸಿಕನದ್ದು.

‘ಅವಳ ಹೆಣ ನೇತಾಡ್ತಿದ್ದದ್ದು ಇನ್ನೊಂದು ಪಾರ್ಶ್ವಕ್ಕೆ. ಕೆಲಸ ನಡೆಯುತ್ತಿದ್ದದ್ದು ಗೇಟಿನ ಕಡೆಗೆ. ರಬ್ಬರ್ ತೋಟ ಹೇಗಿದೆ ಅನ್ನೋ ಕಲ್ಪನೆ ನಿನಗಿದ್ದಿದ್ದರೆ ನೀನು ಈ ಮಾತು ಹೇಳ್ತಾ ಇರ್ಲಿಲ್ಲ. ಅದಕ್ಕೆ ನಿನಗೆ ಮಾಲೀಕನ ಮಾತು ಸತ್ಯ ಅಗ್ಬಿಟ್ಟಿದೆ’

‘ಪಾಂಬು, ಆ ರಬ್ಬರ್ ತೋಟದಲ್ಲಿ ನಾನೂ ದುಡಿದಿದ್ದೋನು. ಸುಮಾರು ನಾಲ್ಕು ವರ್ಷ. ಅಂದ್ರೆ ನೀನು ಬರೋದಿಕ್ಕೆ ಮುಂಚೆ. ನಿನ್ನ ಮಾಲೀಕನ ಬಗ್ಗೆ ನನಗೆ ಚೆನ್ನಾಗಿ ಗೊತ್ತಿದೆ’

ಪ್ರಭಾಕರ ಅಚೇಟಿತನಂತೆ ನಿಂತು ಬಿಟ್ಟ. ರಬ್ಬರ್ ತೋಟದ ಮಾಲೀಕನ ಬಗ್ಗೆ ಹಿತೇಶನಿಗೆ ಗೊತ್ತಿದೆ. ಹಾಗಾದರೆ ಈ ಹಿತೇಶ ಯಾರು? ಇಲ್ಲಿಯ ಮರಳು ದಿಣ್ಣೆಯಲ್ಲೇನು ಕೆಲಸ ಈತನಿಗೆ? ತಾನು ಊಹಿಸಿಕೊಂಡಿದ್ದೆಲ್ಲ ಸುಳ್ಳೇ? ಗೊಂದಲ ಕಾಣಿಸಿತು. ಮೆಲ್ಲಗೆ ಹಿತೇಶನನ್ನು ಕರೆದ.

ಹಿತೇಶ ಕಾಲಿಗೆ ಮೆತ್ತಿಕೊಂಡ ಮರಳನ್ನು ಕೊಡವಿಕೊಂಡ.

‘ಏನು? ಶೆಲ್ಲಿ ಸಾವಿನ ಬಗ್ಗೆ ಯಾರಿಗೂ ಹೇಳ್ಬೇಡ ಅನ್ತಿದ್ದೀಯಾ? ಸರಿ, ಆದ್ರೆ ಒಂದು ಷರತ್ತು... ನೀನು ನನಗೆ ಸಹಾಯ ಮಾಡುವ ಹಾಗಿದ್ದರೆ...’ ಮಾತು ನಿಂತಿತು. ಪ್ರಭಾಕರ ಪಳಗಿದ ಹುಲಿಯಂತಾದ.

‘ಏನು ಹೇಳು, ಒಪ್ಪಿಕೊಳ್ತೀನಿ’

ಅರೆಕ್ಷಣ ಮೌನ ನೆಲೆಸಿತು.

‘ನಾನು ಈ ಮರಳು ದಿಣ್ಣೆಯನ್ನು ಬಿಟ್ಟು ಹೋಗುವಂತೆ ನೀನೇಕೆ ಪ್ರೇರೆಪಿಸುತ್ತಿರುವೆ?’

ಪ್ರಭಾಕರ ಮಂಕನಂತಾದ. ಹಿತೇಶನ ಮಾತಿಗೆ ಉತ್ತರವಿಲ್ಲ. ತಾನೇಕೆ ಅವನನ್ನು ಒತ್ತಾಯಿಸುತ್ತಿರುವೆ? ಇದರ ಹಿಂದಿರುವ ಹುನ್ನಾರವೇನು? ಹಿತೇಶನ ಮುಖದಲ್ಲಿ ಉತ್ತರವಿದೆಯೆನ್ನುವಂತೆ ಅವನನ್ನೇ ದಿಟ್ಟಿಸಿದ.

ತನಗೂ ಅವನಿಗೂ ತಾಳೆಯಿರದ ಮಾತಿದು. ಅವನು ದಿಣ್ಣೆಯಲ್ಲಿ ಅಲೆದಾಡಿದರೆ ತನ್ನ ಗಂಟೇನು ಹೋದಿತು?

‘ನಾನು ನಿನ್ನ ಪ್ರೇರೇಪಿಸುತ್ತಿಲ್ಲ. ನಿನ್ನ ಹಿತೈಷಿಯಾಗಿ ಹೇಳುತ್ತಿರುವೆನಷ್ಟೆ’

‘ಹಿತೈಷಿ?! ಯಾವ ವಿಷಯದಲ್ಲಿ ನೀನು ಹಿತೈಷಿ?’

ಪ್ರಭಾಕರ ಉಗ್ಗಿದವನಂತೆ ಮಾತಿಗಾಗಿ ತಡಕಾಡಿದ. ಹಿತೇಶನಿಗೆ ಆಶ್ಚರ್ಯವಾಯಿತು.

‘ಶೆಲ್ಲಿಯನ್ನು ಕೊಂದದ್ದು ನಾನಲ್ಲ ಅಂತ ನೀನು ಒಪ್ಪಿಕೊಂಡರೆ ಹೇಳ್ತೀನಿ’

ನಿಧಾನಕ್ಕೆ ಪದಗಳು ಹೊರಳಿದವು. ಅದನ್ನು ಒಪ್ಪಿಕೊಳ್ಳುವುದಕ್ಕೆ ತನಗೇನು ಅನಿಸಿತು ಹಿತೇಶನಿಗೆ. ತಲೆಯಲುಗಿಸಿದ.

‘ಹಾಗೆ ಅಂದುಕೋ’

‘ಲಹರಿ ವಿಷಯದಲ್ಲಿ...’ ತಡೆ ತಡೆದು ಮಾತು ಬಂತು. ಹಿತೇಶ ಲಹರಿಯ ಹೆಸರು ಕೇಳುತ್ತಲೇ ಪಾಂಬುವಿನ ಕೊರಳಪಟ್ಟಿ ಹಿಡಿದ.

* * *

ಪಾಂಬು ಉಸಿರು ಬಿಗಿ ಹಿಡಿದು ಕುತ್ತಿಗೆಯನ್ನು ಹಿಂದಕ್ಕೆಳೆದುಕೊಂಡ. ಹಿತೇಶನ ಹಿಡಿತ ಬಿಗಿಯಾಗಿತ್ತು. ಕೊಸರಿಕೊಂಡರೂ ಪ್ರಯೋಜನವಾಗಲಿಲ್ಲ.

## ಹಾದಿ

ಹಲವು
ಹೆಜ್ಜೆಗಳ
ಒಟ್ಟು
ಮೊತ್ತವೇ
ಹಾದಿ!

★ ವೀಣಾ ರವಿ ಪೈ



ಈಶ್ವರ